# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆ ಜಿಲ್ಲೆ

# Bagalkot University

(A State Public University of Govt. of Karanataka)
Mudhol Road, Jamkhandi-587301 Dist: Bagalkote

Mail ID : bgkujkd@gmail.com

Website: https:// bgku.ac.in

**Office of the Registrar**

Tel No: (08353)295123/124,


BGKUJ/RO/2023-24/ 48 Date:15-05-2023

## ಅಧಿಸೂಚನೆ ಪ್ರಕಟಣೆ

**ವಿಷಯ: 2023-24 ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ವಿವಿಧ ಬಗೆಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**
**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12-05-2023**

ಬಾಗಲಕೋಟ ವಿಶ್ವವಿದ್ಯಾಲಯದ ಸಂಯೋಜನೆ ಮೂಲಕ ವಿಶ್ವವಿದ್ಯಾಲಯವು ಪಠ್ಯಕ್ರಮ ರಚಿಸಿರುವ ಹಾಗೂ ಶುಲ್ಕಗಳನ್ನು ನಿಗದಿಪಡಿಸಿರುವ ಕೋರ್ಸಗಳೊಂದಿಗೆ ಬಾಗಲಕೋಟ ಜಿಲ್ಲೆಯ 2023-24ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆ/ ಟ್ರಸ್ಟ್‌ಗಳಿಂದ ಮತ್ತು 2022-23ನೇ ಸಾಲಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2022-23ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಪ್ರಸ್ತುತವಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎಸ್.ಸಿ/ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್.ಸಿ/ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ. ಹಾಗೂ ಸರ್ಟಿಫಿಕೇಟ್ ಕೋರ್ಸ/ ಪಿ.ಜಿ. ಡಿಪ್ಲೋಮಾ ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಸೇರಿದಂತೆ ಇತ್ಯಾದಿ ಸಂಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಮುಂದುವರೆದು, ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಮಹಾವಿದ್ಯಾಲಯ ಸ್ಥಗಿತಗೊಳಿಸಲು, ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ವರ್ಗಾವಣೆ, ಮಹಾವಿದ್ಯಾಲಯದ ಸ್ಥಳಾಂತರ ಇತ್ಯಾದಿಗಳನ್ನು ಮಾಡಬಯಸುವುದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿತ ಶುಲ್ಕ ಮತ್ತು ಕ್ರೀಡಾ ಶುಲ್ಕ ರೂ.1,000/-ಗಳನ್ನು ಪಾವತಿಸಿ, UUCMS ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಯಾವುದೇ ಮಹಾವಿದ್ಯಾಲಯದವರು ಸ್ನಾತಕ ಕೋರ್ಸ ಪ್ರಾರಂಭಿಸಿ ಕನಿಷ್ಠ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದಲ್ಲಿ ಅಂತಹ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಬಹುದಾಗಿದೆ ಮತ್ತು ಎಂ.ಬಿ.ಎ./ ಎಂ.ಸಿ.ಎ./ ಬಿ.ಇಡಿ/ ಬಿ.ಪಿ.ಇಡಿ/ ಎಂ.ಇಡಿ./ ಎಂ.ಪಿ.ಇಡಿ. ಇಂತಹ ಕೋರ್ಸ ಪ್ರಾರಂಭಿಸಲು ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ. ಅಥವಾ ಅಂತಹ ಸಕ್ಷಮ ಪ್ರಾಧಿಕಾರದಿಂದ ಕಡ್ಡಾಯವಾಗಿ ಮಾನ್ಯತೆಯನ್ನು ಪಡೆದುಕೊಂಡಿರಬೇಕು. ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ https://bgku.ac.in Announcement Link ದಲ್ಲಿ Affiliation Notification- 2023-24 ನ್ನು ನೋಡಬಹುದಾಗಿದೆ.

**(ಹೊಸ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಹ ಮಹಾವಿದ್ಯಾಲಯಗಳು ಹಾಗೂ 2022-23ನೇ ಸಾಲಿಗೆ ಮಾನ್ಯತೆ ಕೊನೆಗೊಳ್ಳುವ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಭೌತಿಕರೂಪದಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿಯ ದೂರವಾಣಿ ಸಂಖ್ಯೆ:(08353)295123,295124, ಕ್ಕೆ ಸಂಪರ್ಕಿಸಬಹುದಾಗಿದೆ.)**

| ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕಗಳು | | |
|---|---|---|
| 1 | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | **20.05.2023 ಸಂಜೆ 5.00ರ ಒಳಗಾಗಿ** |
| 2 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/- ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | **22.05.2023 ಸಂಜೆ 5.00ರ ಒಳಗೆ** |
| **ವಿಶೇಷ ಸೂಚನೆ: ದಿನಾಂಕ: 22.05.2023ರ ನಂತರ ಸಲ್ಲಿಸುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.** | | |

| ಸಹಿ/-<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ಸಹಿ/-<br>ಕುಲಸಚಿವರು |
|---|---|